# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 441 (480) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| | ಪ್ರಶ್ನೆ | ಉತ್ತರಗಳು |
|---|---|---|
| (ಅ) | ರಾಜ್ಯದ ಆಯುಷ್ ಇಲಾಖೆ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಮತ್ತು ಜಿಲ್ಲಾ ಆಯುಷ್ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರುಗಳ ಸೇವೆಯನ್ನು ಒದಗಿಸುವಂತೆ ಸಾರ್ವಜನಿಕರಿಂದ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಇಲಾಖೆಯಲ್ಲಿ ಸೃಜನೆಯಾಗಿರುವ ಮೂಲ ಹುದ್ದೆಗಳೆಷ್ಟು; ಬೇಡಿಕೆಯಾನುಸಾರ ಕಳೆದ 10 ವರ್ಷಗಳಲ್ಲಿ ಸೃಜನೆ ಮಾಡಿರುವ ತಜ್ಞ ವೈದ್ಯರು, ಅರೆ ವೈದ್ಯಕೀಯ ಮತ್ತು ಇತರೆ ಸಿಬ್ಬಂದಿಗಳ ಹುದ್ದೆಗಳೆಷ್ಟು ಮತ್ತು ಇತ್ತೀಚಿನ ಅಗತ್ಯಕ್ಕನುಗುಣವಾಗಿ ಹುದ್ದೆಗಳನ್ನು ಸೃಜನೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು) | ಆಯುಷ್ ಇಲಾಖೆ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಮತ್ತು ಜಿಲ್ಲಾ ಆಯುಷ್ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರುಗಳ ಸೇವೆಯನ್ನು ಒದಗಿಸುವಂತೆ ಸಾರ್ವಜನಿಕರಿಂದ ಯಾವುದೇ ಬೇಡಿಕೆ ಬಂದಿರುವುದಿಲ್ಲ.<br><br>ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿಯಲ್ಲಿನ 113 ತಜ್ಞ ವೈದ್ಯರುಗಳ ಹುದ್ದೆಗಳು, 318 ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ 16 ಇತರೆ ಸಿಬ್ಬಂದಿಗಳ ಹುದ್ದೆಗಳು ತಾತ್ಕಾಲಿಕ ಹುದ್ದೆಯಾಗಿರುತ್ತವೆ. ಸದರಿ ಯೋಜನೆಯು ಅಸ್ತಿತ್ವದಲ್ಲಿರುವವರೆಗೂ ಮಾತ್ರ ಈ ಹುದ್ದೆಗಳು ಚಾಲ್ತಿಯಲ್ಲಿರುತ್ತದೆ.<br><br>ಜಿಲ್ಲಾವಾರು ಸಂಪೂರ್ಣ ವಿವರವನ್ನು **ಅನುಬಂಧದಲ್ಲಿ ಲಗತ್ತಿಸಿದೆ.** |
| (ಆ) | ಕೇಂದ್ರ ಸರ್ಕಾರದ ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿಯಲ್ಲಿ ಅನುದಾನ ಪಡೆದು ರಾಜ್ಯದಲ್ಲಿ ಅಭಿವೃದ್ಧಿಪಡಿಸಿರುವ ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳ ವಿವರ ನೀಡುವುದು; ಈ ಆಸ್ಪತ್ರೆಗಳಲ್ಲಿ ಲಭ್ಯವಿರುವ IPD beds ಎಷ್ಟು ಮತ್ತು ಈ ಆಸ್ಪತ್ರೆಗಳಲ್ಲಿ ಒಳರೋಗಿ ವಿಭಾಗದಲ್ಲಿ ದಾಖಲಾಗಿರುವ ರೋಗಿಗಳ ಸಂಖ್ಯೆ ಎಷ್ಟು; (ಕಳೆದ 5 ವರ್ಷಗಳ ಮಾಹಿತಿ ನೀಡುವುದು) | ರಾಷ್ಟ್ರೀಯ ಆಯುಷ್ ಅಭಿಯಾನ (NAM) ಯೋಜನೆಯಡಿ ವಿವಿಧ ಆಯುಷ್ ಪದ್ಧತಿಗಳಲ್ಲಿ ಜಿಲ್ಲಾ ಕೇಂದ್ರ ಸ್ಥಾನದಲ್ಲಿ 20 ತಾಲ್ಲೂಕು ಕೇಂದ್ರ ಸ್ಥಾನದಲ್ಲಿ 60 ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಲಾಗಿದೆ.<br><br>ಸದರಿ ಆಸ್ಪತ್ರೆಗಳಲ್ಲಿ 805 IPD beds ಲಭ್ಯವಿದ್ದು, ಈ ಆಸ್ಪತ್ರೆಗಳಲ್ಲಿ ಈ ಮುಂದಿನಂತೆ ಒಳರೋಗಿಗಳ ವಿಭಾಗದಲ್ಲಿ ರೋಗಿಗಳು ದಾಖಲಾಗಿದ್ದಾರೆ. |

| ವರ್ಷ | ಒಟ್ಟು |
|---|---|
| 2018-19 | 27604 |
| 2019-20 | 38238 |
| 2020-21 | 5628 |
| 2021-22 | 16932 |
| 2022-23 | 38962 |

...2

| | | |
|---|---|---|
| (ಇ) | ಈ ಆಸ್ಪತ್ರೆಗಳಲ್ಲಿ ಒಳರೋಗಿಗಳಿಗೆ ಚಿಕಿತ್ಸೆ ನೀಡುವ ಎಲ್ಲಾ ಸೌಲಭ್ಯಗಳು ಲಭ್ಯವಿದ್ದರೂ ಒಳರೋಗಿಗಳನ್ನು ದಾಖಲು ಮಾಡಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಆಸ್ಪತ್ರೆಗಳಲ್ಲಿ ಒಳರೋಗಿಗಳನ್ನು ದಾಖಲು ಮಾಡಿಕೊಳ್ಳದಿರಲು ಕಾರಣಗಳೇನು ಮತ್ತು ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು) | ಬಂದಿದೆ<br>ಜಿಲ್ಲಾ ಆಯುಷ್ ಅಧಿಕಾರಿಗಳು ಕಡ್ಡಾಯವಾಗಿ ಒಳರೋಗಿಗಳ ದಾಖಲಾತಿಯನ್ನು ಪ್ರಾರಂಭಿಸುವಂತೆ ಸೂಚನೆ ನೀಡಲಾಗಿರುತ್ತದೆ. ಪ್ರಗತಿ ಪರಿಶೀಲನಾ ಸಭೆಯಲ್ಲಿಯೂ ಕೂಡ ಎಲ್ಲಾ ಮೇಲ್ದರ್ಜೆಗೇರಿಸಲಾದ ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ ಒಳರೋಗಿಗಳನ್ನು ದಾಖಲಿಸುವಂತೆ ಸೂಚನೆ ನೀಡಲಾಗುತ್ತಿದೆ. |
| (ಈ) | ರಾಜ್ಯದ ಆಯುಷ್ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿಕೊಂಡಿದೆಯೇ; ನಿಯಮಾನುಸಾರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗಿದೆಯೇ? ವೃಂದ ಮತ್ತು ನೇಮಕಾತಿ ನಿಯಮಗಳ ಸಹಿತ ಮಾಹಿತಿ ನೀಡುವುದು) | ಆಯುಷ್ ಇಲಾಖೆಯಲ್ಲಿ ಬೋಧಕ ಮತ್ತು ಬೋಧಕೇತರ ವೃಂದದ ಖಾಯಂ ಹುದ್ದೆಗಳಿಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿಕೊಳ್ಳಲಾಗಿದೆ.<br>ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆಯು ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ: ಆಕುಕ 139 ಪಿಐಎಂ 2023**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

# ಅನುಬಂಧ

| ಕ್ರ ಸಂ | ಜಿಲ್ಲೆಯ ಹೆಸರು | ನ್ಯಾಮ್ ಯೋಜನೆಯಡಿ ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ | | |
|---|---|---|---|---|
| | | ತಜ್ಞವೈದ್ಯರು | ಅರೆ ವೈದ್ಯಕೀಯ ಸಿಬ್ಬಂದಿ | ಇತರೆ |
| 1 | ಬಾಗಲಕೋಟೆ | 2 | 12 | 0 |
| 2 | ಬಳ್ಳಾರಿ | 4 | 6 | 0 |
| 3 | ಬೆಳಗಾವಿ | 9 | 25 | 1 |
| 4 | ಬೆಂಗಳೂರು ಗ್ರಾಮಾಂತರ | 2 | 4 | 0 |
| 5 | ಬೀದರ್ | 3 | 11 | 0 |
| 6 | ಚಾಮರಾಜನಗರ | 3 | 9 | 0 |
| 7 | ಚಿಕ್ಕಬಳ್ಳಾಪುರ | 2 | 5 | 0 |
| 8 | ಚಿಕ್ಕಮಗಳೂರು | 6 | 12 | 0 |
| 9 | ಚಿತ್ರದುರ್ಗ | 5 | 10 | 1 |
| 10 | ದಕ್ಷಿಣ ಕನ್ನಡ | 2 | 11 | 0 |
| 11 | ದಾವಣಗೆರೆ | 1 | 10 | 0 |
| 12 | ಧಾರವಾಡ | 0 | 4 | 1 |
| 13 | ಗದಗ | 4 | 11 | 1 |
| 14 | ಹಾಸನ | 8 | 22 | 1 |
| 15 | ಹಾವೇರಿ | 4 | 9 | 2 |
| 16 | ಕಲ್ಬುರ್ಗಿ | 0 | 0 | 0 |
| 17 | ಕೊಡಗು | 6 | 15 | 3 |
| 18 | ಕೋಲಾರ | 2 | 8 | 0 |
| 19 | ಕೊಪ್ಪಳ | 7 | 20 | 2 |
| 20 | ಮಂಡ್ಯ | 9 | 27 | 1 |
| 21 | ಮೈಸೂರು | 4 | 10 | 1 |
| 22 | ರಾಯಚೂರು | 8 | 15 | 0 |
| 24 | ರಾಮನಗರ | 2 | 2 | 0 |
| 25 | ತುಮಕೂರು | 2 | 11 | 1 |
| 26 | ಉಡುಪಿ | 3 | 5 | 1 |
| 27 | ಉತ್ತರ ಕನ್ನಡ | 7 | 17 | 0 |
| 28 | ವಿಜಯನಗರ | 3 | 7 | 0 |
| 29 | ವಿಜಯಪುರ | 2 | 6 | 0 |
| 30 | ಯಾದಗಿರಿ | 3 | 14 | 0 |
| | ಒಟ್ಟು | 113 | 318 | 16 |

ಆಯುಕ್ತರು

ಆಯುಕ್ತರು
ಆಯುರ್ವೇದ, ಯೋಗ ಮತ್ತು ನ್ಯಾಚುರೋಪತಿ
ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ
(ಆಯುಷ್) ಇಲಾಖೆ, ಧನ್ವಂತರಿ ರಸ್ತೆ,
ಬೆಂಗಳೂರು – 560 009